ನವ ಮಂಗಳೂರು ಬಂದರು ಪ್ರಾಧಿಕಾರವು ವಿವಿಧೋದ್ದೇಶ ಕಾರ್ಗೋ ಬರ್ತ್ (ಬರ್ತ್ ನಂ.17), ಪಣಂಬೂರು ಗ್ರಾಮ, ಸುರತ್ಕಲ್ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಭಿವೃದ್ಧಿಪಡಿಸಲು ಪ್ರಸ್ತಾಪಿಸಿರುತ್ತಾರೆ. ಸದರಿ ಯೋಜನೆಗೆ ಪರಿಸರ ಪ್ರಭಾವ ಅಧ್ಯಯನ ಅಧಿಸೂಚನೆ 2006 ರ ಪ್ರಕಾರ ಪರಿಸರ ವಿಮೋಚನಾ ಪತ್ರವನ್ನು ಪಡೆಯಬೇಕಾಗಿರುತ್ತದೆ ಮತ್ತು ಅದರ ಅಂಗವಾಗಿ ಸಾರ್ವಜನಿಕ ಪರಿಸರ ಆಲಿಕೆ ಸಭೆಯನ್ನು ಸಹ ನಡೆಸಬೇಕಾಗಿರುತ್ತದೆ. ಇದರನ್ವಯ ಸದರಿ ಪ್ರವರ್ತಕರು ಕೇಂದ್ರ ಅರಣ್ಯ, ಪರಿಸರ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯ, ಭಾರತ ಸರ್ಕಾರ, ಇವರಿಂದ Terms of Reference (TOR) ಪತ್ರವನ್ನು No. F.No.10/55/2021-IA.III ದಿನಾಂಕ 06.01.2022 ರಂದು ಪಡೆದಿರುತ್ತಾರೆ. ಅದರಂತೆ, ಪ್ರವರ್ತಕರ ಪತ್ರ ಸಂಖ್ಯೆ 4/8/EC/B-17/CE(C)/EE/(MW)/ 2019-20/TS ದಿನಾಂಕ 06.03.2023 ರ ಕೋರಿಕೆಯ ಪ್ರಕಾರ ಸಾರ್ವಜನಿಕ ಪರಿಸರ ಆಲಿಕೆಯನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ವತಿಯಿಂದ ಕೆಳಕಂಡ ವಿವರಗಳಂತೆ ನಡೆಸಲಾಗುತ್ತಿದೆ :

| | | |
|---|---|---|
| 1 | ಸಂಸ್ಥೆಯ ಹೆಸರು ಮತ್ತು ವಿಳಾಸ | ಮುಖ್ಯ ಅಭಿಯಂತರರು (ಸಿವಿಲ್),<br>ನವ ಮಂಗಳೂರು ಬಂದರು ಪ್ರಾಧಿಕಾರ,<br>ಭಾರತ ಸರ್ಕಾರ (Ministry of Ports, shipping and Waterways),<br>ಪಣಂಬೂರು, ಮಂಗಳೂರು – 575 010. |
| 2 | ಉದ್ದೇಶಿತ ಯೋಜನೆಯ ಸ್ಥಳ. | ಪಣಂಬೂರು ಗ್ರಾಮ, ಸುರತ್ಕಲ್ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ, ಕರ್ನಾಟಕ. |
| 3 | ಯೋಜನೆಯ ಕಾರ್ಯಚಟುವಟಿಕೆ | ವಿವಿಧೋದ್ದೇಶ ಕಾರ್ಗೋ ಬರ್ತ್ (ಬರ್ತ್ ನಂ.17) ರಚನೆ. |
| 4 | ಪರಿಸರ ಸಾರ್ವಜನಿಕ ಸಭೆಯ ಸ್ಥಳ, ದಿನಾಂಕ ಮತ್ತು ಸಮಯ. | 07ನೇ ಜುಲೈ 2023 ರಂದು ಶುಕ್ರವಾರ ಬೆಳಗ್ಗೆ 11.00 ಘಂಟೆಗೆ ಜಿಲ್ಲಾಧಿಕಾರಿಗಳ ಕಛೇರಿ, 2ನೇ ಮಹಡಿಯಲ್ಲಿರುವ ಸಭಾಂಗಣ, ಮಂಗಳೂರು. ದಕ್ಷಿಣ ಕನ್ನಡ ಜಿಲ್ಲೆ. |
| 5 | ಯೋಜನೆಯ ವೆಚ್ಚ | ರೂ. 213.91 ಕೋಟಿಗಳು. |
| 6 | ಯೋಜನೆಯ ದಾಖಲೆಗಳನ್ನು ಸಾರ್ವಜನಿಕ ಪರಾಮರ್ಶೆಗೆ ಇಡುವ ಸ್ಥಳ. | (ಅ) ಜಿಲ್ಲಾಧಿಕಾರಿಗಳ ಕಛೇರಿ, ಮಂಗಳೂರು, ದಕ್ಷಿಣ ಕನ್ನಡ ಜಿಲ್ಲೆ.<br>(ಆ) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರ ಕಛೇರಿ, ಜಿಲ್ಲಾ ಪಂಚಾಯತ್, ಮಂಗಳೂರು,ದಕ್ಷಿಣ ಕನ್ನಡ ಜಿಲ್ಲೆ.<br>(ಇ) ಜಿಲ್ಲಾ ಕೈಗಾರಿಕಾ ಕೇಂದ್ರ, ಮಂಗಳೂರು, ದಕ್ಷಿಣ ಕನ್ನಡ ಜಿಲ್ಲೆ.<br>(ಈ) ತಾಲ್ಲೂಕು ಪಂಚಾಯತ್ ಕಛೇರಿ, ಸುರತ್ಕಲ್ ತಾಲ್ಲೂಕು.<br>(ಉ) ಗ್ರಾಮ ಪಂಚಾಯಿತಿ ಕಾರ್ಯಾಲಯ, ಪಣಂಬೂರು,<br>(ಊ) ಪ್ರಾದೇಶಿಕ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಪರಿಸರ ಭವನ, 10ಬಿ, ಬೈಕಂಪಾಡಿ ಕೈಗಾರಿಕಾ ಪ್ರದೇಶ, ಮಂಗಳೂರು – 560 011.<br>(ಋ) ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯ, ದಕ್ಷಿಣ ವಲಯ ಕಛೇರಿ, ನಂ.ಇ–3/240, ಕೇಂದ್ರೀಯ ಸದನ, 4ನೇ ಮಹಡಿ, ಇ ಮತ್ತು ಎಫ್ ವಿಂಗ್ಸ್, 17ನೇ ಮುಖ್ಯ ರಸ್ತೆ, 2ನೇ ಬ್ಲಾಕ್, ಕೋರಮಂಗಲ, ಬೆಂಗಳೂರು–560 034.<br>(ೠ) ಸಹಾಯ ಕೇಂದ್ರ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ನೆಲ ಅಂತಸ್ತು, ನಂ.49, ಪರಿಸರ ಭವನ, ಚರ್ಚ್ ಸ್ಟ್ರೀಟ್, ಬೆಂಗಳೂರು–560 001. |

**ಸೂಚನೆ:**

ಯೋಜನಾ ಸ್ಥಳದಲ್ಲಿ ವಾಸವಾಗಿರುವ ಆಸಕ್ತ ನಿವಾಸಿಗಳು, ಪರಿಸರಾಸಕ್ತ ಗುಂಪುಗಳು ಮತ್ತು ಈ ಯೋಜನೆಯಿಂದ ತೊಂದರೆಗೊಳಗಾಗಬಹುದಾದ ಸಾರ್ವಜನಿಕರು ತಮ್ಮ ಸಲಹೆಗಳು, ಅನಿಸಿಕೆಗಳು, ಟೀಕೆಟಿಪ್ಪಣಿಗಳು ಹಾಗು ಆಕ್ಷೇಪಣೆಗಳನ್ನು ಮೌಖಿಕ/ಲಿಖಿತ/ಮಿಂಚಂಚೆ ಮುಖಾಂತರ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ/ಅಧ್ಯಕ್ಷರು, ಸಾರ್ವಜನಿಕ ಪರಿಸರ ಸಮಿತಿ (ಜಿಲ್ಲಾಧಿಕಾರಿಗಳು, ಮಂಗಳೂರು, ದಕ್ಷಿಣ ಕನ್ನಡ ಜಿಲ್ಲೆ) ಇವರಿಗೆ ಈ ಅಧಿಸೂಚನೆ ಪ್ರಕಟವಾದ 30 ದಿನಗಳ ಒಳಗೆ ಸಲ್ಲಿಸತಕ್ಕದ್ದು. ಇಚ್ಛೆಯುಳ್ಳ ಸಾರ್ವಜನಿಕರು ಮೇಲೆ ತಿಳಿಸಿರುವ ದಿನದಂದು ಪರಿಸರ ಸಾರ್ವಜನಿಕ ಸಭೆಯಲ್ಲಿ ಪಾಲ್ಗೊಳ್ಳಬಹುದಾಗಿದೆ. ಹೆಚ್ಚಿನ ವಿವರಗಳನ್ನು ಮಂಡಳಿಯ ಜಾಲತಾಣ : http://kspcb.karnataka.gov.in ನಲ್ಲಿ ಪಡೆಯಬಹುದು.

ಸಹಿ/-

ಸದಸ್ಯ ಕಾರ್ಯದರ್ಶಿ

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ

---

**No PCB 11 Infra 2023** Date:08.06.2023

## Environmental Public Hearing Notice

New Mangalore Port Authority has proposed to develop Multipurpose Cargo Berth (Berth No.17) at Panambur Village, Suratkal Taluk, Mangaluru, Dakshina Kannada District, Karnataka. The project requires Environmental Clearance as per EIA Notification, 2006 and accordingly the proponent has obtained Terms of Reference (ToR) issued by MoEF & CC, Government of India, vide No.F.No.10/55/2021-IA.III, dated 06.01.2022. As part of the Environmental Clearance process pubic consultation is to be conducted. Hence, as per request letter of the proponent, No. 4/8/EC/B-17/CE(C)/EE/(MW)/ 2019-20/TS, dated 06.03.2023, the Environmental Public Hearing is being conducted by the Board as per details given below:

| | | |
|---|---|---|
| 1. | Name & Address of the company | The Chief Engineer, (Civil),<br>New Mangalore Port Authority, Govt. of India (Ministry of Ports, Shipping and Waterways), Panambur, Mangaluru 575 010. |
| 2. | Proposed location of the project | Panambur Village, Suratkal Taluk, Dakshina Kannada District, Karnataka. |
| 3. | Details of activity. | Formation of Multipurpose Cargo Berth (Berth No.17) |
| 4. | Date, time and venue of Public hearing. | 07th July 2023 Friday at 11.00 A M at the Meeting Hall, Office of the Deputy Commissioner, 2nd Floor, Mangaluru, Dakshina Kannada District. |
| 5. | Capital Investment | Rs 213.91 Cr |
| 6. | Places of availability of project documents kept open for public. | (a) Office of the Deputy Commissioner, Mangaluru, Dakshina Kannada District.<br>(b) Chief Executive Officer, Zilla Panchayat, Mangaluru , Dakshina Kannada District.<br>(c) District Industries Centre, Mangaluru, Dakshina Kannada District.<br>(d) Taluk Panchayath Office, Suratkal.<br>(e) Village Panchayath Office, Panambur.<br>(f) Office of the Regional Office, Karnataka State Pollution Control Board, Parisara Bhavana, 10B, Baikampady Industrial Area, Mangaluru – 575 011.<br>(g) Ministry of Environment Forest & Climate Change, South Zone Office, E-3/240, Kendriya Sadan, 4th Floor, E&F Wings, 17th Main Road, 2nd Block, Koramangala, Bengaluru – 560 034.<br>(h) HELP DESK, Karnataka State Pollution Control Board, Ground Floor, No.49, Parisara Bhavan, Church Street, Bengaluru – 560 001. |

**Note:**

Suggestions, views, comments and objections of interested bona fide residents, environmental groups and others located at project site likely to be affected by the proposed project are invited within 30 days from the date of publication of this notice. They can also make oral/written/E-Mail suggestions to the Karnataka State Pollution Control Board/Chairman, Environmental Public Hearing Committee (**Deputy Commissioner, Mangaluru, Dakshina Kannada District**). Interested public can participate in the Public Hearing at the above mentioned place & time. For further details, KSPCB please visit the Website: **http://kspcb.karnataka.gov.in**.

**Sd/**

**Member Secretary**

**Karnataka State Pollution Control Board**